## **ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ : ಕೇಂದ್ರ ಕಛೇರಿ : ಬೆಂಗಳೂರು**

ಸಂಖ್ಯೆ : ಕರಾಸಾ/ಕೇಕ/ನೇಮಕ/ಸಿ2/ /2018-19 ದಿನಾಂಕ: 17.08.2018.

### **ಪ್ರಕಟಣೆ**

ವಿಷಯ : ದರ್ಜೆ-3 ಮೇಲ್ವಿಚಾರಕೇತರ ಹುದ್ದೆಗಳ ನೇರ ನೇಮಕಾತಿಗಾಗಿ ಸಾಮಾನ್ಯ ಸಾಮರ್ಥ್ಯ ಪರೀಕ್ಷೆ ಹಾಜರಾಗಲು ಕರೆಪತ್ರಗಳನ್ನು ಮುದ್ರಿಸಿಕೊಳ್ಳುವ ಕುರಿತು.

ಉಲ್ಲೇಖ : ಜಾಹೀರಾತು ಸಂ.1/2016 & 2/2016 ದಿನಾಂಕ 06.01.2016.

***

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮವು ಉಲ್ಲೇಖಿತ ಜಾಹೀರಾತಿನ ಅನುಸಾರ ದರ್ಜೆ-3, ಮೇಲ್ವಿಚಾರಕೇತರ ಹುದ್ದೆಗಳ ನೇರ ನೇಮಕಾತಿಗಾಗಿ ದಿನಾಂಕ 25.08.2018 & 26.08.2018 ರಂದು ಸಾಮಾನ್ಯ ಸಾಮರ್ಥ್ಯ ಪರೀಕ್ಷೆಯನ್ನು ನಿಗದಿಪಡಿಸಿದ್ದು, ಅರ್ಹ ಅಭ್ಯರ್ಥಿಗಳು ನಿಗಮದ ವೆಬ್-ಸೈಟ್ www.ksrtcjobs.com ನಲ್ಲಿ ಕರೆಪತ್ರಗಳನ್ನು ಮುದ್ರಿಸಿಕೊಳ್ಳುತ್ತಿರುವುದು ಸರಿಯಷ್ಟೆ.

ಸದರಿ ಜಾಹೀರಾತಿಗೆ ಸ್ಪಂದಿಸಿ ಅರ್ಜಿ ಸಲ್ಲಿಸಿರುವ ಸಾಕಷ್ಟು ಅಭ್ಯರ್ಥಿಗಳು ಅರ್ಜಿ ಪ್ರತಿಗಳನ್ನು ಕಳೆದುಕೊಂಡು ಅರ್ಜಿ ಸಂಖ್ಯೆ ಲಭ್ಯವಿಲ್ಲದ ಕಾರಣ ಕರೆಪತ್ರಗಳನ್ನು ಮುದ್ರಿಸಿಕೊಳ್ಳಲು ಸಾಧ್ಯವಾಗುತ್ತಿಲ್ಲವೆಂದು ನಿಗಮಕ್ಕೆ ಕರೆ ಮಾಡುತ್ತಿರುವ ಹಿನ್ನಲೆಯಲ್ಲಿ ಅಂತಹ ಅಭ್ಯರ್ಥಿಗಳ ಅನುಕೂಲಕ್ಕಾಗಿ ನಿಗಮದ ವೆಬ್-ಸೈಟ್ www.ksrtcjobs.com ನಲ್ಲಿ ಅರ್ಜಿ ಸಂಖ್ಯೆ, ಹೆಸರು, ತಂದೆಯ ಹೆಸರು & ಜಿಲ್ಲೆಗಳ ಮಾಹಿತಿಯನ್ನು ಬಿತ್ತರಿಸಿರುವುದರಿಂದ ಅದನ್ನು ಸದುಪಯೋಗಪಡಿಸಿಕೊಳ್ಳಬೇಕಾಗಿ ಅಭ್ಯರ್ಥಿಗಳಿಗೆ ತಿಳಿಸಲಾಗಿದೆ.